ಮಾತನಾಡಿಕೊಳ್ಳುತ್ತಿದ್ದರು, ಆದರೆ ನನಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ.

‘ಹೂಂ, ಮೆನ್ಸಿಸ್!... ಮುಟ್ಟು’.

‘ಓಹ್, ಬಹುಶಃ ಇನ್ನೂ ಆರಂಭವಾಗಿಲ್ಲ’, ಸೋದರತ್ತೆಯವರು ಹೇಳಿದರು, ‘ಆದ್ರೆ ನಿನ್ನ ಶರೀರ ಬೆಳೆಯುತ್ತಿದೆ, ನಿನಗೆ ಬ್ರಾ ಅಭ್ಯಾಸ ಮಾಡುವಂತೆ ನಿನ್ನ ತಾಯಿಗೆ ಹೇಳ್ತೀನಿ’.

ಸೋದರತ್ತೆಯವರಿಗೆ ಏನು ಹೊಳೆಯಿತೋ ಏನೋ; ಅವರು ಬಟ್ಟೆಗಳ ಬೀರುವನ್ನು ತೆರೆದು ಅದರಿಂದ ಒಂದು ಬ್ರಾ ತೆಗೆದು ನನ್ನೆಡೆಗೆ ಚಾಚಿದರು.

‘ಇದನ್ನು ಹಾಕ್ಕೊಂಡು ನೋಡು’. ನಾನು ಅವರ ಕೈಯಿಂದ ಬ್ರಾ ತೆಗೆದುಕೊಂಡೆ. ಇದು ಅಮ್ಮ ಹಾಕಿಕೊಳ್ಳುತ್ತಿದ್ದ ಬ್ರಾದ ಅಂತಿರಲಿಲ್ಲ. ಅಮ್ಮ ಬಿಳಿ ಬಣ್ಣದ ಸರಳವಾಗಿದ್ದ ಬ್ರಾ ಹಾಕಿಕೊಳ್ಳುತ್ತಿದ್ದರು; ಆದರೆ ಇದು ಕಪ್ಪು ಬಣ್ಣದ ಲೇಸಿನ, ಸುಂದರವಾದ ಬ್ರಾ ಆಗಿತ್ತು. ನಾನು ಆ ಬ್ರಾ ಹಿಡಿದು ಮತ್ತೆ ಬಚ್ಚಲು ಮನೆಗೆ ಹೊರಡಲನುವಾದೆ.

‘ಇಲ್ಲೇ ಹಾಕ್ಕೊಂಡು ನೋಡು! ನನ್ನ ಹತ್ರ ನಾಚಿಕೆ ಏಕೆ? ನಾನು ನಿನ್ನ ಅಮ್ಮನಂತೆಯೇ’, ಎಂದರು ಸೋದರತ್ತೆ.

ನನಗೆ ತುಂಬಾ ನಾಚಿಕೆಯಾಗುತ್ತಿತ್ತು, ಆದರೆ ನಾನು ನೂತನ್ ಸೋದರತ್ತೆಯವರ ಆಗ್ರಹವನ್ನು ತಿರಸ್ಕರಿಸದಾದೆ. ನನ್ನ ಫ್ರಾಕನ್ನು ಹೆಗಲುಗಳಿಂದ ಸರಿಸಿ, ಬ್ರಾ ಪಟ್ಟಿಗಳನ್ನು ತೋಳುಗಳಿಗೆ ಹಾಕಿಕೊಂಡೆ. ಈಗ ಕೈಗಳನ್ನು ಹಿಂದಕ್ಕೆ ಮಾಡಿ ಹುಕ್ಸ್ ಹಾಕಿಕೊಳ್ಳುವುದು ಕಷ್ಟವಾಯಿತು. ನನ್ನ ಅವಸ್ಥೆಯನ್ನು ನೋಡಿ ಸೋದರತ್ತೆಯವರು ಗಟ್ಟಿಯಾಗಿ ನಕ್ಕರು.

‘ಬುದ್ದೂ! ಅದನ್ನು ಹೀಗೆ ಹಾಕಿಕೊಳ್ಳಬಾರದು, ಈ ಕಡೆ ಬಾ.’ ಅವರು ನನ್ನನ್ನು ತಮ್ಮ ಬಳಿಗೆ ಎಳೆದುಕೊಂಡು ನನಗೆ ಬ್ರಾ ಹಾಕಿಕೊಳ್ಳುವುದನ್ನು ಕಲಿಸಲು ಆರಂಭಿಸಿದರು.



ಸಾಮಾನ್ಯವಾಗಿ ಎಲ್ಲಾ ಹುಡುಗಿಯರು ಮೊದಲ ಬಾರಿಗೆ ಯಾವಾಗ ಮತ್ತು ಹೇಗೆ ಬ್ರಾ ಹಾಕಿಕೊಳ್ಳುವುದನ್ನು ಕಲಿಯುತ್ತಾರೆ ಎಂಬುದು ನನಗೆ ತಿಳಿದಿಲ್ಲ. ಆದರೆ ನಾನು ನೂತನ್ ಸೋದರತ್ತೆಯವರಿಂದ ಬ್ರಾ ಹಾಕಿಕೊಳ್ಳುವ ವಿಧಾನವನ್ನು ಕಲಿತೆ. ಅದು ತುಂಬಾ ವಿಚಿತ್ರ ಅನುಭವವಾಗಿತ್ತು. ನಾನು ಬ್ರಾ ಮತ್ತು ಫ್ರಾಕ್ ಧರಿಸಿ ನನ್ನನ್ನು ನಾನು ಕನ್ನಡಿಯಲ್ಲಿ ನೋಡಿದೆ, ನನಗೆ ನನ್ನ ಆಕಾರವೇ ವಿಚಿತ್ರವಾಗಿ ಕಂಡಿತು.

ಅಂದು ರಾತ್ರಿ ನಾನು ಯುವತಿಯರ ಜೀವನದ ಮೊದಲ ಪಾಠವನ್ನು ಓದಿದೆ; ಅದೂ ಯುವತಿಯಾಗುವುದಕ್ಕೆ ವರ್ಷಕ್ಕೆ ಮೊದಲು ಓದಿದೆ. ಸುಮಾರು ಒಂದು ವರ್ಷದ ನಂತರ ನನಗೂ ಮುಟ್ಟು ಆರಂಭವಾಯಿತು. ಅದೊಂದು ಭಯಾನಕ ಅನುಭವವಾಗಿತ್ತು. ನಾನು ಸಹಜವಾಗಿ ಮೂತ್ರವಿಸರ್ಜನೆ ಮಾಡಲು ಕೂತಾಗ ರಕ್ತ ಬರುವುದು ಕಂಡಿತು. ನಾನು ಹೆದರಿ, ರೋದಿಸಿದೆ. ರೋದಿಸುತ್ತಲೇ ಅಮ್ಮನ ಬಳಿಗೆ ಹೋದೆ. ಅಮ್ಮ ಕೇಳಿದಾಗ ಹೇಳಿದೆ. ಅವರು ಮುಗುಳ್ನಗುತ್ತಾ ಹೇಳಿದರು, ‘ಯೋಚ್ನೆ ಮಾಡ್ಬೇಡ, ಇದು ಎಲ್ಲಾ ಹುಡುಗಿಯರಿಗೂ ಆಗುತ್ತೆ. ನನಗೂ ಆಗುತ್ತೆ. ನಡಿ, ನಾನು ನಿನಗೆ ಬಟ್ಟೆ ಉಪಯೋಗಿಸುವುದನ್ನು ಕಲಿಸುತ್ತೇನೆ. ಹೆದ್ರಬೇಡ, ಐದು ದಿನಗಳ ನಂತರ ಅದು ತನ್ನಷ್ಟಕ್ಕೆ ತಾನೇ ನಿಂತು ಹೋಗುತ್ತೆ, ಆದ್ರೆ ಈ ಬಗ್ಗೆ ಯಾರೊಂದಿಗೂ ಚರ್ಚಿಸಬೇಡ. ನಾಳೆ ನಿನ್ನನ್ನು ಡಾಕ್ಟರ್ ಹತ್ರ ಕರ್ಕೊಂಡ್ ಹೋಗ್ತೀನಿ’.

ಅಮ್ಮ ನನ್ನ ಕಣ್ಣೀರನ್ನು ಒರೆಸಿದರು. ನನಗೆ ಬಟ್ಟೆ ಪ್ರಯೋಗ ಮಾಡುವುದನ್ನು ಕಲಿಸಿದರು. ಆಗ ಅವರು ಪ್ಯಾಡ್ ಕೊಳ್ಳುತ್ತಿರಲಿಲ್ಲ. ಅದಕ್ಕೆ ಹೆಚ್ಚು ದುಡ್ಡು ಕೊಡಬೇಕಿತ್ತು, ಅದಕ್ಕೆ ಅಮ್ಮನ ಸಂಪಾದನೆ ಸಾಕಾಗುತ್ತಿರಲಿಲ್ಲ. ನಾವು ನಮ್ಮ ಹೊರ ಉಡುಪುಗಳನ್ನು ಅಂಗಳದಲ್ಲಿ ಕಟ್ಟಿದ್ದ ಹಗ್ಗಕ್ಕೆ ನೇತು ಹಾಕಿ ಒಣಗಿಸುತ್ತಿದ್ದವು. ಆದರೆ ಬ್ರಾ, ಪ್ಯಾಂಟಿ ಮತ್ತು ಮುಟ್ಟಿಗೆ ಸಂಬಂಧಿಸಿದ ಬಟ್ಟೆಗಳನ್ನು ಕೋಣೆಯಲ್ಲಿಯೇ ಒಣಗಿಸುತ್ತಿದ್ದೆವು. ಒಂದು ವೇಳೆ ಯಾರಾದರು ಕೋಣೆಗೆ ಬಂದರೆ, ಕೂಡಲೇ ಅವುಗಳನ್ನು ಬೇರೆ ಬಟ್ಟೆಗಳಿಂದ ಮುಚ್ಚುತ್ತಿದ್ದೆವು; ಸಾಮಾನ್ಯವಾಗಿ ಅಮ್ಮನ ಸೀರೆಯಿಂದ ಮುಚ್ಚುತ್ತಿದ್ದೆವು. ಈ ಮೂರು ವಿಧದ ಬಟ್ಟೆಗಳು ರಾತ್ರಿ ವೇಳೆಯಲ್ಲಿ, ನಾವು ಬಾಗಿಲನ್ನು ಮುಚ್ಚಿದಾಗಲೇ ಒಣಗುತ್ತಿದ್ದವು. ಆಗ ಯಾರೂ ಬರುವ ಭಯವಿರುತ್ತಿರಲಿಲ್ಲ. ಕ್ರಮೇಣ ನನಗೆ, ಇವು ನಮ್ಮ ಗೌಪ್ಯ ಬಟ್ಟೆಗಳಾಗಿದ್ದು, ಇವುಗಳನ್ನು ಒಳ ಉಡುಪುಗಳು ಎನ್ನಲಾಗುತ್ತದೆ ಎಂಬುದು ಅರ್ಥವಾಗಿತ್ತು.

ಅಮ್ಮ ಮರುದಿನ ನನ್ನನ್ನು ಮಹಿಳಾ ವೈದ್ಯರ ಬಳಿಗೆ ಕರೆದೊಯ್ದಿದ್ದರು. ನಾನು ವಯಸ್ಸಿಗೆ ಮೊದಲೇ ಋತುಮತಿಯಾಗಿದ್ದೆ. ವೈದ್ಯರು, ‘ಚಿಂತಿಸಬೇಕಿಲ್ಲ, ಕೆಲವರಿಗೆ ಬೇಗನೆ ಆಗುತ್ತದೆ’ ಎಂದಿದ್ದರು.

ನಾನು ‘ಕೆಲವರಲ್ಲಿ’ ಸೇರಿದ್ದೆ. ಆದರೆ ನೂತನ್ ಸೋದರತ್ತೆಯವರು ಅಂದು ರಾತ್ರಿ ನನ್ನನ್ನು ಪ್ರಶ್ನಿಸಿದ್ದಾಗ, ನಾನು ಶರೀರದ ಈ ಪ್ರಕೃತಿಯಿಂದ ಅಪರಿಚಿತಳಾಗಿದ್ದೆ. ಎರಡು ದಿನಗಳ ನಂತರ ಅಮ್ಮ ಮರಳಿ ಬಂದರು. ಅಂದು ಭಾನುವಾರವಾಗಿತ್ತು. ಅಂದು ಅಮ್ಮ ಸಹ ನೂತನ್ ಸೋದರತ್ತೆಯವರ ಮನೆಯಲ್ಲಿ ಉಳಿದರು. ನಾನು ಸೋಮವಾರದ ಬೆಳಿಗ್ಗೆ ನನ್ನ ಬಟ್ಟೆಗಳನ್ನು ಒಟ್ಟು ಮಾಡಿಕೊಂಡೆ. ಆ ಬಟ್ಟೆಗಳಲ್ಲಿ ಸೋದರತ್ತೆಯವರು ಕೊಟ್ಟ ಆ ಬ್ರಾ ಸಹ ಇತ್ತು. ನಾನು ಆ ಬ್ರಾವನ್ನು ತೆಗೆದುಕೊಂಡು ಹೋಗಲೋ ಅಥವಾ ಸೋದರತ್ತೆಯವರಿಗೆ ಮರಳಿ ಕೊಡುವುದೋ ಎಂಬ ಸಮಸ್ಯೆಯಲ್ಲಿ ಸಿಲುಕಿಕೊಂಡೆ. ನಾನು ಅದನ್ನು ನನ್ನ ಬಳಿ ಇಟ್ಟುಕೊಳ್ಳಲು ಬಯಸುತ್ತಿದ್ದೆ, ಏಕೆಂದರೆ ನಾನು ಮನೆಯಲ್ಲಿ ಒಂಟಿಯಾಗಿದ್ದಾಗ, ಅದನ್ನು ಧರಿಸಿ ನೋಡಿಕೊಳ್ಳಬಹುದಾಗಿತ್ತು. ನನ್ನ ಅವಚೇತನ ಮನಸ್ಸಿನಲ್ಲಿ ಆಕಾರ ತಾಳುತ್ತಿದ್ದ ಯುವತಿ ಸಹಜವಾಗಿ ಆ ಚಿಕ್ಕ ಒಳ ಉಡುಪಿನೆಡೆಗೆ ಆಕರ್ಷಿತಳಾಗಿದ್ದಳು.

ಅಮ್ಮನಿಗೆ ವಿಧಿವತ್ತಾಗಿ ವಿಚ್ಛೇದನ ಲಭಿಸಲಿಲ್ಲ. ಸಂಬಂಧಿಕರು, ನೆಂಟರಿಷ್ಟರು ಮಧ್ಯ ಪ್ರವೇಶಿಸಿ, ಕುಟುಂಬ ಮತ್ತು ವಂಶಕ್ಕೆ ಅಪಕೀರ್ತಿ ಬರುವುದೆಂದು ಹೇಳಿ ಅಮ್ಮ ಮತ್ತು ಅಪ್ಪನ ನಡುವೆ ಒಪ್ಪಂದ ಮಾಡಿಸಿದರು. ಅಮ್ಮ ಸ್ವತಂತ್ರಳಾಗಿರುತ್ತಾಳೆ, ಅಪ್ಪಾ ಸಹ ಸ್ವತಂತ್ರರಾಗಿರುತ್ತಾರೆ. ಅಪ್ಪ ನನ್ನ ವಿದ್ಯಾಭ್ಯಾಸದ ಖರ್ಚನ್ನು ಭರಿಸುತ್ತಾರೆ ಎಂದು ತೀರ್ಮಾನಿಸಲಾಯಿತು. ಆದರೆ ಅಮ್ಮ ಖರ್ಚಿನ ಹಣ ಪಡೆಯಲು ಒಪ್ಪಲಿಲ್ಲ. ಅವರು ನನ್ನನ್ನು ಅಪ್ಪಾನ ಋಣದಿಂದ ಮುಕ್ತವಾಗಿಡಲು ಬಯಸುತ್ತಿದ್ದರು.

‘ಇಷ್ಟವಿದ್ದರೆ ಮುಂದೆ ಕನ್ಯಾದಾನದ ವೇಳೆಗೆ ಬನ್ನಿ! ನಾನು ನನ್ನ ಮಗಳನ್ನು ಸಾಕಲು ಸಮರ್ಥಳಾಗಿದ್ದೇನೆ, ನನಗೆ ನಿಮ್ಮ ಯಾವುದೇ ಆರ್ಥಿಕ ಸಹಾಯ ಬೇಕಿಲ್ಲ’, ಅಮ್ಮ ಅಪ್ಪಾನಿಗೆ ಹೇಳಿದ್ದರು.

ಅಪ್ಪಾ ಒತ್ತಾಯಿಸಲಿಲ್ಲ. ಇದು ನನಗೆ ಸದಾ ಚುಚ್ಚುತ್ತಿತ್ತು. ನಾನು ಅವರ ಮಗಳಾಗಿರಲಿಲ್ಲವೇ? ನಾನು ಅವರ ರಕ್ತವಾಗಿರಲಿಲ್ಲವೇ? ಅವರು ಅಮ್ಮನೊಂದಿಗೆ ನನ್ನನ್ನು ಸಹ ತಮ್ಮಿಂದ ಬೇರೆ ಮಾಡಿದ್ದು ಉಚಿತವಾಗಿತ್ತೆ? ಅಮ್ಮ ಹೇಳಿದಂತೆ, ನಮಗೆ ಬೇರೆ ಮನೆ ಬೇಗನೆ ಸಿಕ್ಕಿತು. ಅಮ್ಮನಿಗೆ ಬೇರೆ ನೌಕರಿ ಸಹ ಸಿಕ್ಕಿತು. ಈಗ ಅವರ ಸಂಬಳ ಸಹ ಹೆಚ್ಚಿತ್ತು. ಈಗ ಅವರು ಸೆಕ್ರೆಟೇರಿಯಟ್‌ನಲ್ಲಿ ಗುಮಾಸ್ತರಾಗಿದ್ದರು. ಆದರೆ ಅವರನ್ನು ಒಂದು ಷರತ್ತಿನ ಮೇಲೆ ನೌಕರಿಗೆ ತೆಗೆದುಕೊಳ್ಳಲಾಗಿತ್ತು; ಅದೇನೆಂದರೆ, ಅವರು ಆರು ತಿಂಗಳಿನಲ್ಲಿ ಟೈಪಿಂಗ್ ಪರೀಕ್ಷೆಯನ್ನು ಪಾಸು ಮಾಡಿಕೊಳ್ಳಬೇಕಿತ್ತು. ತದನಂತರವೇ ಅವರ ನೌಕರಿ ಕಾಯಂ ಆಗುತ್ತಿತ್ತು. ಅಮ್ಮ ಟೈಪಿಂಗ್ ಕಲಿಯಲು ಆರಂಭಿಸಿದರು. ಅವರು ಕಚೇರಿಯಿಂದ ಮರಳಿ ಬಂದ ನಂತರ, ಮನೆಯ ಬಳಿಯೇ ಇದ್ದ ಟೈಪಿಂಗ್‌ಸೆಂಟರ್‌ನಲ್ಲಿ ಟೈಪಿಂಗ್ ಕಲಿಯಲು ಹೋಗುತ್ತಿದ್ದರು. ನಾನು ಶಾಲೆಯಿಂದ ಬಂದ ನಂತರ ಸಂಜೆಯ ತಿಂಡಿಯನ್ನು ತಯಾರಿಸಿ, ಅಮ್ಮನ ಬರುವಿಕೆಯನ್ನು ನಿರೀಕ್ಷಿಸುತ್ತಾ, ಹೋಮ್‌ವರ್ಕ್ ಮಾಡಿಕೊಳ್ಳುತ್ತಿದ್ದೆ.

ನಮ್ಮ ಹೊಸ ಮನೆ ಎರಡನೆಯ ಅಂತಸ್ತಿನಲ್ಲಿತ್ತು. ಮನೆ ಸುಂದರವಾಗಿದ್ದು, ಬಾಲ್ಕನಿ ಚೆನ್ನಾಗಿತ್ತು. ಇಲ್ಲಿ ಲೆಟ್ರಿನ್ ಬಾತ್‌ರೂಮ್ ಜೊತೆಯಲ್ಲಿದ್ದವು. ಒಂದು ವರಾಂಡ, ಒಂದು ಶಯನಾಗಾರ ಮತ್ತು ಒಂದು ಚಿಕ್ಕ ಸ್ಟೋರ್ ಇದ್ದು, ಇದು ಅಡುಗೆ ಮನೆಗೆ ಕೂಡಿಕೊಂಡಿತ್ತು. ಗೋಡೆಯಲ್ಲಿ ದೊಡ್ಡ ದೊಡ್ಡ ಅಲ್ಮಾರಗಳಿದ್ದವು. ವಾಸ್ತವವಾಗಿ ಸರ್ಕಾರಿ ಮನೆಯಾಗಿದ್ದು, ರಾಜ್ಯ ಸರ್ಕಾರದ ಸಿಬ್ಬಂದಿಯೊಬ್ಬರಿಗೆ ಅಲಾಟ್ ಆಗಿತ್ತು. ಆ ಸಿಬ್ಬಂದಿ ತನ್ನ ಸ್ವಂತ ಮನೆಯಲ್ಲಿದ್ದ, ಅದನ್ನು ಅವನು ತನ್ನ ತಮ್ಮನ ಹೆಸರಿನಲ್ಲಿ ಕಟ್ಟಿಸಿದ್ದ. ಈ ಸರ್ಕಾರಿ ಮನೆಯನ್ನು ಅವನು ಬಾಡಿಗೆಗೆ ಕೊಡುತ್ತಿದ್ದ. ಯಾರಾದರೂ ವಿಚಾರಣೆಗೆ ಬಂದರೆ, ನೀವು ನಿಮ್ಮನ್ನು ಮನೆ ಮಾಲೀಕನ ಸಂಬಂಧಿಕರು, ಆ ಸಿಬ್ಬಂದಿ ತಮ್ಮೊಂದಿಗೇ ಇರುತ್ತಾರೆ ಎಂದು ಹೇಳಬೇಕೆಂದು ಅವನು ಬಾಡಿಗೆದಾರರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದ. ಇಂಥ ಮೋಸ ಭೋಪಾಲ್‌ನಲ್ಲಿ ಸಾಮಾನ್ಯ ಸಂಗತಿಗಳಾಗಿದ್ದವು. ಸಿಬ್ಬಂದಿ ಮಾತ್ರವಲ್ಲ, ಪತ್ರಕರ್ತರು, ಮುಖಂಡರು